## ನಿವೇದನೆ

# ಹಣಕಾಸಿನ ಸಾಕ್ಷರತೆಯ ಮಹತ್ವ ಅಗತ್ಯ

ಹಣಕಾಸಿನ ವಿಚಾರದಲ್ಲಿ ಭಾರತೀಯರಿಗೆ ತಿಳಿವಳಿಕೆಯ ಕೊರತೆಯಿದೆ. ಇದನ್ನು ಹಣಕಾಸಿನ ಸಾಕ್ಷರತೆಯ ಕೊರತೆ ಅಂತಲೂ ಕರೆಯಬಹುದು. ಲಾಭಾಂಶದ ಮೇಲಿನ ಅತಿ ಆಸೆಗಿಂತ ಸಾಕ್ಷರತೆಯ ಕೊರತೆಯೇ ಅನೇಕ ವೇಳೆ ಜನಸಾಮಾನ್ಯರ ಪಾಲಿಗೆ ಮುಳುವಾಗಿ ಪರಿಣಮಿಸುತ್ತಿದೆ.

‘ಸರ್ವಗುಣಗಳೂ ಹಣದ ಜೊತೆಗೆ ತಳಕು ಹಾಕಿಕೊಂಡಿವೆ’ ಎಂಬ ಮಾತು ಇಂದು ನಿನ್ನೆಯದಲ್ಲ. ಮತ್ತು ಅದು ಬೇರೆ ಕಡೆಯಿಂದ ಎರವಲು ಪಡೆದ ಚಿಂತನೆಯೂ ಅಲ್ಲ. ಹಣದ ಮಹತ್ವವನ್ನು ಗುರುತಿಸುವ ಆಲೋಚನಾಕ್ರಮ ನಮ್ಮಲ್ಲಿ ಬಹಳ ಹಿಂದಿನಿಂದಲೂ ಚಲಾವಣೆಯಲ್ಲಿ ಇದೆಯಾದರೂ ಹಣ ಈಗ ಹಿಂದೆಂದಿಗಿಂತ ಹೆಚ್ಚು ಕಿಮ್ಮತ್ತು ಪಡೆದಿದೆ ಎಂಬ ತಥ್ಯವನ್ನು ಯಾರೂ ಅಲ್ಲಗಳೆಯರಾರರು.

ಹೊಟ್ಟೆ ಕಟ್ಟಿ, ಚೂರುಪಾರು ಉಳಿಸಿಕೊಂಡ ಹಣದ ಮೌಲ್ಯ ವೃದ್ಧಿಯಾಗಲಿ, ಹಣದಿಂದ ಸಿಗುವ ಸುಖ–ಸವಲತ್ತು ಹೆಚ್ಚಲಿ ಎಂಬುದು ಮನುಷ್ಯನ ಸಹಜ ಬಯಕೆ. ಇದೇ ಕಾರಣಕ್ಕಾಗಿ ಆತ ಹಣದ ಮೌಲ್ಯವನ್ನು ಹೆಚ್ಚು ವೇಗವಾಗಿ ಏರಿಸುವ ಹೂಡಿಕೆಗಳತ್ತ ಚಿತ್ತ ಹರಿಸುತ್ತಾನೆ.

ಆದರೆ, ಹೂಡಿಕೆಯ ಅವಕಾಶಗಳತ್ತ ಗಮನಹರಿಸುವಾಗ ಆತ ಹಣದ ಸುರಕ್ಷತೆಯ ವಿಚಾರಕ್ಕೆ ನೀಡಬೇಕಾದಷ್ಟು ಗಮನ ನೀಡುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ, ಹಣಕಾಸಿನ ವಿಚಾರದಲ್ಲಿ ಭಾರತೀಯರಿಗೆ ಇರುವ ತಿಳಿವಳಿಕೆಯ ಕೊರತೆ. ಇದನ್ನು ಹಣಕಾಸಿನ ಸಾಕ್ಷರತೆಯ ಕೊರತೆ ಅಂತಲೂ ಕರೆಯಬಹುದು. ಲಾಭಾಂಶದ ಮೇಲಿನ ಅತಿ ಆಸೆಗಿಂತ ಸಾಕ್ಷರತೆಯ ಕೊರತೆಯೇ ಅನೇಕ ವೇಳೆ ಜನಸಾಮಾನ್ಯರ ಪಾಲಿಗೆ ಮುಳುವಾಗಿ ಪರಿಣಮಿಸುತ್ತಿದೆ.

ಜನಸಾಮಾನ್ಯರಲ್ಲಿನ ತಿಳಿವಳಿಕೆಯ ಕೊರತೆಯನ್ನೇ ಕೆಲವು ದಂಧೆಕೋರರು ವಂಚನೆಯ ಬಲೆಯಾಗಿಸಿಕೊಳ್ಳುತ್ತಿದ್ದಾರೆ. ಅಲ್ಪ ಅವಧಿಯಲ್ಲಿ ಹೆಚ್ಚು ಬಡ್ಡಿ ಇಲ್ಲವೇ ಹೆಚ್ಚು ಲಾಭಾಂಶ ಕೊಡುವ ಬಗೆಬಗೆಯ ಆಮಿಷಗಳನ್ನು ಜನರ ಮುಂದಿಟ್ಟು ಬಲೆಗೆ ಕೆಡವುತ್ತಿದ್ದಾರೆ. ಇಂತಹ ವಂಚನೆ ಪ್ರಕರಣಗಳು ಪದೇ ಪದೇ ಬಯಲಿಗೆ ಬಂದಿದ್ದರೂ ಅದರಿಂದ ಜನ ಪಾಠ ಕಲಿತಿಲ್ಲ ಎಂಬುದಕ್ಕೆ ಇತ್ತೀಚಿನ ನಿದರ್ಶನ ‘ಐ ಮಾನಿಟರಿ ಅಡ್ವೈಸರಿ’ (ಐಎಂಎ) ಕಂಪನಿಯ ವಂಚನೆ ಪ್ರಕರಣ.

ಮೇಲ್ನೋಟಕ್ಕೆ ವ್ಯಾವಹಾರಿಕ ಅಂತ ಕಾಣಿಸುವ ನಮ್ಮ ಎಷ್ಟೋ ಮಂದಿ ನಿಜಾರ್ಥದಲ್ಲಿ ವ್ಯಾವಹಾರಿಕ ಆಗಿರುವುದಿಲ್ಲ. ಸ್ನೇಹ, ಸಲುಗೆ, ಸಂಬಂಧ, ಮುಲಾಜು, ಜಾತಿ, ಧರ್ಮದಂತಹ ಹತ್ತಾರು ಅಂಶಗಳು ವ್ಯವಹಾರದ ವಿಚಾರದಲ್ಲಿ ಇರಬೇಕಾದ ನಿರ್ದಿಷ್ಟತೆಯನ್ನು ದುರ್ಬಲಗೊಳಿಸುತ್ತವೆ. ವಂಚನೆಯ ಜಾಲಗಳು ಈ ದೌರ್ಬಲ್ಯಗಳನ್ನು ಬಳಸಿಕೊಂಡು ಜನರಿಗೆ ಮಂಕುಬೂದಿ ಎರಚುತ್ತಲೇ ಇವೆ.

ಇಂತಹ ಪ್ರಕರಣಗಳಲ್ಲಿ ವಂಚಕ ವ್ಯಕ್ತಿಯ ದುಷ್ಟತನದ ಜೊತೆ ವ್ಯವಸ್ಥೆಯ ದುಷ್ಟತನವೂ ಸೇರಿ ಅಮಾಯಕರಿಗೆ ಬರೆ ಎಳೆಯುವ ಸಾಧ್ಯತೆ ಇದೆ. ಕಾರ್ಯಸಾಧುವಲ್ಲದ ಯೋಜನೆಗಳು ಮತ್ತು ಯೋಚನೆಗಳ ಬಗ್ಗೆ ಗೊತ್ತಿದ್ದರೂ ಅವುಗಳನ್ನು ಗೋಪ್ಯವಾಗಿ ಇರಿಸುವ ಸಲುವಾಗಿ ವಂಚಕ ವ್ಯಕ್ತಿ, ಕಂಪನಿಗಳಿಂದ ಕೊಪ್ಪರಿಗೆಗಟ್ಟಲೆ ಹಣ ಪೀಕಿ ಆತ ಅಥವಾ ಅವು ದಿವಾಳಿಯಾಗುವಂತೆ ಮಾಡುವುದಿದೆ. ಆಯಕಟ್ಟಿನ ಜಾಗದಲ್ಲಿ ಕುಳಿತಿದ್ದ ಅಧಿಕಾರಿಗಳು, ಐಎಂಎ ಕಂಪನಿಯಿಂದ ಹಣ ಪೀಕಿದ್ದಾರೆ ಎನ್ನಲಾದ ನಿದರ್ಶನಗಳಿಗಿಂತ ಇನ್ನಾವ ಪುರಾವೆ ಬೇಕು? ಇನ್ನು, ಅಧಿಕಾರಸ್ಥ ರಾಜಕಾರಣಿಗಳ ಪಾತ್ರದ ಬಗ್ಗೆ ಪ್ರತ್ಯೇಕವಾಗಿ ವಿವರಿಸಬೇಕಾದ ಅಗತ್ಯವೇ ಇಲ್ಲ.

ನಮ್ಮಲ್ಲಿ ಪೊಲೀಸ್ ವ್ಯವಸ್ಥೆಯು ಜನಸ್ನೇಹಿಯಾಗಿಲ್ಲ ಎಂಬ ದೂರು ಸಾರ್ವತ್ರಿಕ. ಪೊಲೀಸರಿಗಿಂತ ಕಟುವಾಗಿ ಜನಸಾಮಾನ್ಯರ ಜೊತೆ ರಾಷ್ಟ್ರೀಕೃತ ಬ್ಯಾಂಕುಗಳು ನಡೆದುಕೊಂಡ ನಿದರ್ಶನಗಳಿಗೆ ಕೊರತೆ ಇಲ್ಲ. ಈ ಬ್ಯಾಂಕ್‌ಗಳ ನೂರೆಂಟು ಷರತ್ತುಗಳು, ಇಲ್ಲಸಲ್ಲದ ನಿಯಮಗಳ ಜೊತೆ ಏಗಲಾರದ ಜನ ಅವುಗಳಿಂದ ಅಂತರ ಕಾಯ್ದುಕೊಳ್ಳಲು ಬಯಸುತ್ತಾರೆ. ಗ್ರಾಹಕರ ಜೊತೆ ಬ್ಯಾಂಕ್‌ಗಳು ವ್ಯವಹರಿಸುವ ರೀತಿ ಬದಲಾಗಬೇಕಾಗಿದೆ.

ಹೂಡಿಕೆಗೆ ಇರುವ ಅವಕಾಶಗಳು ಮತ್ತು ಹೂಡಿಕೆ ಮಾಡುವಾಗ ಗಮನಿಸಬೇಕಾದ ಪ್ರಮುಖ ಅಂಶಗಳ ಬಗ್ಗೆ ಅರಿವು ಮೂಡಿಸುವ ಕೆಲಸ ದೊಡ್ಡ ಮಟ್ಟದಲ್ಲಿ ಆಗಬೇಕಿದೆ. ನಿಶ್ಚಿತ ಠೇವಣಿ, ಈಕ್ವಿಟಿ, ಸರ್ಕಾರದ ಸಾಲಪತ್ರ, ಬೇರೆಬೇರೆ ಬಗೆಯ ಬಾಂಡುಗಳ ಕುರಿತು ಗೃಹಿಣಿಯರು, ಗ್ರಾಮೀಣರಿಗೆ ಪೂರ್ಣ ಮಾಹಿತಿ ತಲುಪಿಸಬೇಕು. ಇಲ್ಲಿ ಹೂಡಿಕೆ ಮಾಡಿದರೆ ಆಗುವ ಲಾಭನಷ್ಟ ಮತ್ತು ರಿಸ್ಕ್ ಅಂಶಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಬೇಕು. ಹೂಡಿಕೆಗಳ ಕುರಿತ ಅರಿವು ಈ ಕಾಲದ ಅಗತ್ಯಗಳಲ್ಲಿ ಒಂದು ಎಂಬುದನ್ನು ನಿರ್ಲಕ್ಷಿಸಬಾರದು.

ಚಿಟ್ ಫಂಡ್ ವ್ಯವಹಾರ ಗಲ್ಲಿಗಲ್ಲಿಯಲ್ಲಿಯೂ ನಡೆಯುತ್ತಿದೆ. ಯಾವುದು ಕಾನೂನಿನ ಚೌಕಟ್ಟಿಗೆ ಒಳಪಟ್ಟಿದೆ, ಯಾವುದು ಇಲ್ಲ ಎಂಬುದು ಸಾಮಾನ್ಯರಿಗೂ ಗೊತ್ತಾಗಬೇಕು. ಹಣಕಾಸು ವಹಿವಾಟಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಿಯಂತ್ರಿಸಲು, ಆ ಬಗ್ಗೆ ನಿಗಾ ವಹಿಸಲು ನಮ್ಮಲ್ಲಿ ಹಲವಾರು ಸಂಸ್ಥೆಗಳಿವೆ. ಯಾರೋ ಬಂದು ದೂರು ದಾಖಲಿಸಲಿ ಎಂದು ಕಾಯುವ ಬದಲು ಈ ಸಂಸ್ಥೆಗಳು ಇನ್ನಷ್ಟು ಜವಾಬ್ದಾರಿಯಿಂದ ಹಾಗೂ ದಕ್ಷತೆಯಿಂದ ಕೆಲಸ ನಿರ್ವಹಿಸಬೇಕಾದ ಜರೂರು ಇದೆ.

■ ಎನ್. ಉದಯಕುಮಾರ್



ಈಶ್ವರ